1993ನೇ ಸಾಲಿನಲ್ಲಿ ರಾಜ್ಯಕ್ಕೆ ಮಂಜೂರು ಮಾಡಿರುವ 19 ಹೊಸ ಐಸಿಡಿಎಸ್ ಯೋಜನೆಗಳಲ್ಲಿ 2 ಯೋಜನೆಗಳನ್ನು ಸ್ವಯಂ ಸೇವಾ ಸಂಸ್ಥೆಗಳಿಂದ ಕಾರ್ಯಗತಗೊಳಿಸಲು ಸೂಚಿಸಿದೆ.

ವಿಷಯ : - ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳಲ್ಲಿ ರತಕ್ಕ ಭೋಧನಾ ಸಿಬ್ಬಂದಿಯನ್ನು ಭರ್ತಿ ಮಾಡುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 138(220)

ಶ್ರೀ ಆರ್. ದಯಾನಂದರಾವ್(ಗಾಂಧಿನಗರ)

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳಲ್ಲಿ ಖಾಲಿ ಇರುವ ಭೋಧನಾ ಸಿಬ್ಬಂದಿ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಅವುಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಚೌಡರೆಡ್ಡಿ

(ನಗರಾಭಿವೃದ್ಧಿ ಸಚಿವರು)

122 (ನೂರ ಇಪ್ಪತ್ತೆರಡು)

ಬೆಂಗಳೂರು ಮಹಾನಗರ ಪಾಲಿಕೆಗೆ ನಿವೃತ್ತಿ, ಮರಣ ಮತ್ತು ರಾಜೀನಾಮೆಗಳಿಂದ ತೆರವಾದ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದೆ.

ವಿಷಯ:- ಬೆಂಗಳೂರು ನಗರದಲ್ಲಿ ಹಳೇ ನೀರಿನ ಪೈಪುಗಳನ್ನು ಬದಲಾಯಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 139(147)

ಶ್ರೀ ಆರ್.ವಿ.ದೇವರಾಜ್(ಚಾಮರಾಜಪೇಟೆ)

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಬೆಂಗಳೂರು ನಗರದಲ್ಲಿ ಅದರಲ್ಲೂ ಸಿಟಿ ಮತ್ತು ಚಾಮರಾಜಪೇಟೆ ಭಾಗಗಳಲ್ಲಿ ಹಳೆಯ ನೀರಿನ ಪೈಪುಗಳು ತುಕ್ಕು ಹಿಡಿದು ಸೋರುತ್ತಿರುವುದರಿಂದ ಅವುಗಳನ್ನು ಬದಲಾಯಿಸಲು ಬೆಂಗಳೂರು ಜಲಮಂಡಳಿಯವರು ಯಾವುದಾದರೂ ಕಾರ್ಯಕ್ರಮ ರೂಪಿಸಿಕೊಂಡಿದ್ದಾರೆಯೇ

2. ಆದಕ್ಕೆ ಎಷ್ಟು ಹಣ ಅಂದಾಜು ಮಾಡಲಾಗಿದೆ.

3. ಸರ್ಕಾರದವರು ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಅಥವಾ ಹುಡ್ಕೋದಿಂದ ಹಣ ಸಹಾಯ ಕೇಳಿರುವರೇ.

4. 1993-94ರಲ್ಲಿ ಅದಕ್ಕಾಗಿ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಲು ಉದ್ದೇಶಿಸಲಾಗಿದೆ.

ಶ್ರೀ ಚೌಡರೆಡ್ಡಿ

(ನಗರಾಭಿವೃದ್ಧಿ ಸಚಿವರು)

ಹೌದು, ರೂಪಿಸಿಕೊಂಡಿದ್ದಾರೆ ಮತ್ತು ಈಗಾಗಲೇ 14.05 ಲಕ್ಷ ರೂಗಳ ವೆಚ್ಚದಲ್ಲಿ 3930 ಮೀಟರ್‌ಗಳಷ್ಟು ಉದ್ದ ಕೊಳವೆಗಳನ್ನು ನಗರದ ಸಿಟಿ ಭಾಗಗಳಲ್ಲಿ ಬದಲಾಯಿಸಲಾಗಿದೆ.

ರೂ. 10.00 ಕೋಟಿಗಳು.

ಬೆಂಗಳೂರು ಜಲ ಮಂಡಳಿಯವರು ಇದಕ್ಕಾಗಿ ಹುಡ್ಕೋದಿಂದ ಹಣ ಸಹಾಯವನ್ನು ಕೇಳಿರುತ್ತಾರೆ.

ಸುಮಾರು 10.00 ಲಕ್ಷ ರೂಪಾಯಿಗಳನ್ನು ಮಂಡಳಿಯವರು ಖರ್ಚು ಮಾಡಲು ಉದ್ದೇಶಿಸಿದ್ದಾರೆ.

ವಿಷಯ:- ಬೆಂಗಳೂರು ನಗರಕ್ಕೆ ಕಾವೇರಿ ನಾಲ್ಕನೇ ಹಂತದ ಯೋಜನೆಯನ್ನು ಜಾರಿಗೆ ತರುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 141(150)

ಶ್ರೀ ಆರ್.ವಿ.ದೇವರಾಜ್(ಚಾಮರಾಜಪೇಟೆ)

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರಕ್ಕೆ ಹೆಚ್ಚಿನ ನೀರು ಸರಬರಾಜು ಒದಗಿಸಲು ಕಾವೇರಿ 4ನೇ ಹಂತದ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಯ ಗಾತ್ರವೆಷ್ಟು? ಹಾಗೂ ಎಷ್ಟು ನೀರು ಸರಬರಾಜು ಮಾಡುವ ಯೋಜನೆ ಇದೆ.

ಇ) ಬೆಂಗಳೂರು ಮಹಾನಗರಪಾಲಿಕೆಯು ಈ ಉದ್ದೇಶಿತ ಯೋಜನೆಗೆ ನೀಡಬೇಕಾಗಿರುವ ಹಣವೆಷ್ಟು? ಹಾಗೂ ಸರ್ಕಾರದವರು ನೀಡಲಿರುವ ಹಣವೆಷ್ಟು?

ಈ) ಕೇಂದ್ರ ಸರ್ಕಾರ ಅಥವಾ ವಿಶ್ವಬ್ಯಾಂಕಿನ ಸಹಾಯವನ್ನು ಈ ಯೋಜನೆಗೆ ಕೋರಲಾಗುವುದೇ?

ಉ) 1993-94ರಲ್ಲಿ ಈ ಯೋಜನೆಗೆ ಸರ್ಕಾರ ಖರ್ಚು ಮಾಡಲು ಉದ್ದೇಶಿಸಿರುವ ಹಣದ ಮೊತ್ತ ಎಷ್ಟು?

ಊ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಚೌಡರೆಡ್ಡಿ

(ನಗರಾಭಿವೃದ್ಧಿ ಸಚಿವರು)

-ಹೌದು-

ಕಾವೇರಿ 4ನೇ ಹಂತದ ಯೋಜನೆಯ ಅಂದಾಜು ವೆಚ್ಚ ಸುಮಾರು 1000 ಕೋಟಿ ರೂ.ಗಳು. ಈ ಯೋಜನೆಯು ಪೂರ್ಣಗೊಂಡಾಗ ನಗರಕ್ಕೆ ದಿನಂಪ್ರತಿ 540 ದಶಲಕ್ಷ ಲೀಟರ್ ಹೆಚ್ಚುವರಿ ನೀರು ದೊರೆಯುವುದು.

ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

-ಇಲ್ಲ-

1993-94ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆ 1327 ಲಕ್ಷಗಳನ್ನು ಅವಕಾಶ ಮಾಡಲಾಗಿದೆ.

ಕಾವೇರಿ 4ನೇ ಹಂತದ ಯೋಜನೆಯ ಮೊದಲನೆಯ ಹಂತದ ಮುಖ್ಯ ಕಾಮಗಾರಿಗಳನ್ನು 1994-95ರಲ್ಲಿ ಪ್ರಾರಂಭಿಸಿ, 1999-2000ರ ಕೊನೆಯ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.